# ಹಿರಿಯ ಶ್ರೇಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ ಗೌರಿಬಿದನೂರು

**ಸಿ.ಸಿ. ಸಂಖ್ಯೆ . 220/2019**

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಮಲ್ಲಪ್ಪ | ಸಿ.ಡಬ್ಲ್ಯು | : | 04 |
| ತಂದೆ / ಗಂಡನ ಹೆಸರು | : | ಮೈಲಾರಪ್ಪ | ಪಿ.ಡಬ್ಲ್ಯು | : | 03 |
| ವಯಸ್ಸು | : | 56 ವರ್ಷ | ಪ್ರಮಾಣೀಕರಿಸಿದ ದಿನಾಂಕ | : | 22.04.2026 |
| ವೃತ್ತಿ | : | ವ್ಯವಸಾಯ | | | |
| ವಾಸಸ್ಥಳ | : | ಬಿ. ಬೊಮ್ಮಸಂದ್ರ | | | |

ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

ಚಾಸಾ 1 ರವರು ನನಗೆ ಅತ್ತೆ ಆಗಬೇಕು. ಚಾಸಾ 2 ರವರು ನನ್ನ ಹೆಂಡತಿ. ಚಾಸಾ 3 ರವರು ನನ್ನ ಅಕ್ಕ. ಚಾಸಾ 5 ಮತ್ತು 6 ಅಕ್ಕ ಪಕ್ಕದ ಮನೆಯವರು. ಚಾಸಾ 7 ರಿಂದ 9 ಒಂದೆ ಊರಿನವರು. ಆರೋಪಿತರು ನನ್ನ ಸಂಬಂದಿಕರು. 2 ನೇ ಆರೋಪಿತರು ನನಗೆ ಅಣ್ಣನಾಗಬೇಕು.

ಈಗ 6 ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ನಮ್ಮಗಳ ಮನೆಗಳ ಹಿಂದೆ ಸರ್ಕಾರಿ ರಸ್ತೆ ಮಾಡಲು ಅನುಮೋದನೆ ಸಿಕ್ಕಿತು, ಆದ್ದುದರಿಂದ ಸರ್ಕಾರಿ ರಸ್ತೆ ಮಾಡಲು ಹೋದಾಗ, ಆರೋಪಿತರು ತಮ್ಮ ಮನೆಯ ಹಿಂದೆ ರಸ್ತೆಗೆ ಅಡ್ಡಲಾಗಿ ಬೇಲಿ ಹಾಕಿರುತ್ತಾರೆ. ಆಗ ಚಾಸಾ 1 ರವರು ಬೇಲಿ ಯಾಕೆ ಹಾಕುತ್ತೀರಾ ರಸ್ತೆ ಮಾಡಿದರೆ ನಮ್ಮದು ಅರ್ಧ ನಿಮ್ಮದು ಅರ್ಧ ಹೋಗುತ್ತದೆ, ಆದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ಹೇಳಿದಕ್ಕೆ ಇಬ್ಬರು ಜಗಳ ವಾಡಿರುತ್ತಾರೆ. ನಂತರ ಚಾಸಾ 1 ರವರು ಪೋಲಿಸ್ ಠಾಣೆಗೆ ದೂರು ಕೊಡಲು ಹೋದಾಗ ಪೋಲಿಸರು ಚಾಸಾ 1 ರವರಿಗೆ ಆರೋಪಿತರಿಗೆ ಬುದ್ದಿ ಹೇಳಿ ವಾಪಸ್ಸು ಕಳುಹಿಸಿರುತ್ತಾರೆ.

ಅದರ ನಂತರ ಮಾರನೆ ದಿನ ರಾತ್ರಿ ಆರೋಪಿತರು ಚಾಸಾ 1 ರವರಿಗೆ ಸದರಿ ರಸ್ತೆ ಜಾಗಕ್ಕೆ ಸಂಬಂಧಿಸಿದಂತೆ ರಾತ್ರಿ 08.00 ಘಂಟೆಗೆ ಮತ್ತೆ ಗಲಾಟೆ ಮಾಡಿ ಚಾಸಾ 1

ರವರಿಗೆ ಕೈಕಾಲುಗಳಿಂದ ಹೊಡೆಯುತ್ತಿದ್ದರು. ನಾನು ರಾತ್ರಿ ಹೊಲಕ್ಕೆ ನೀರು ಬಿಟ್ಟು ವಾಪಸ್ಸು ಬರುತ್ತಿದ್ದಾಗ ಆರೋಪಿತರು ಚಾಸಾ 1 ರವರಿಗೆ ಹೊಡೆಯುವುದನ್ನು ನೋಡಿ ಅವರನ್ನು ಬಿಡಿಸಿಕೊಂಡು ಎಲ್ಲರಿಗೂ ಸಮಾಧಾನ ಮಾಡಿರುತ್ತೇನೆ.

ಆರೋಪಿತರು ವಾಪಸ್ಸು ಹೋದವರು ಮತ್ತೆ ತಿರುಗಿ ಬಂದು ನಮಗೂ ಸಹ ಹೊಡೆದಿರುತ್ತಾರೆ, ಕಲ್ಲುಗಳಿಂದ ಹೊಡೆದಿರುತ್ತಾರೆ. ತದನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಾನು ಈ ಘಟನೆಯ ಬಗ್ಗೆ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ಥೇನೆ. ಸಾಕ್ಷಿಯು ಮು.ಮಾ 1 ಮತ್ತು 2 ನ್ನು ನೋಡಿ ಸದರಿ ಕಲ್ಲುಗಳಿಂದ ಆರೋಪಿತರು ನನಗೂ ಚಾಸಾ 1 ಮತ್ತು 2 ರವರಿಗೂ ಸಹ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ.

1 ನೇ ಆರೋಪಿಯು ನನಗೆ 1 ತಿಂಗಳ ಹಿಂದೆ ಮಚ್ಚು ತೆಗೆದು ಕೊಂಡು ಹೊಡೆಯುವುದಾಗಿ ಹೆದರಿಸಿರುತ್ತಾನೆ, ಇರುವ ಒಂದು ಕೈ ಮತ್ತು ಒಂದು ಕಾಲನ್ನು ಸಹ ತೆಗೆದು ಹಾಕುವುದಾಗಿ ಹೆದರಿಸಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಕೆ.ಎಲ್.ಆರ್ ವಕೀಲರಿಂದಃ</u>

ರಸ್ತೆಯ ವಿಚಾರವಾಗಿ ಗಲಾಟೆ ಆಗಿರುತ್ತದೆ. ರಸ್ತೆ ಮಾಡಲು ಪ್ರಯತ್ನಿಸಿದ ಜಾಗವು ನಾನು ಹುಟ್ಟುವ ಮೊದಲಿನಿಂದನೂ ರಸ್ತೆಯೆ ಆಗಿದ್ದು, ಎಲ್ಲರೂ ಸಹ ಅದನ್ನು ಓಡಾಡಲು ಬಳಸುತ್ತಾರೆ. ಸದರಿ ಜಾಗ ಆರೋಪಿತರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಜಾಗ ಸರ್ಕಾರಕ್ಕೆ ಸೇರಿದ್ದು, ನಮ್ಮ ಮತ್ತು ಆರೋಪಿತರ ಜಾಗದ ನಡುವೆ ರಸ್ತೆ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಜಾಗವು ಸರ್ಕಾರಿ ಜಾಗ ಎಂದು ಸಾಭೀತು ಪಡಿಸಿಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಸದರಿ ಜಾಗ ಆರೋಪಿತರಿಗೆ ಸೇರಿದ್ದು ಆದ್ದರಿಂದ ಅದಕ್ಕೆ ಸಂಬಂಧಿಸಿದಂತೆ ನೀವು ಅಥವಾ ಪೋಲಿಸರು ಯಾವುದೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದು ಅವರ ಮನೆಗೆ ಹೋಗಲು ಹೇಗೆ ಬರಬೇಕೆಂದು ಆರೋಪಿತರ ವಕೀಲರಿಗೆ ಮರು ಪ್ರಶ್ನಿಸುತ್ತಾರೆ.

ಗಲಾಟೆ ನಡೆದ ದಿನಾಂಕ ನನಗೆ ಮರೆತು ಹೋಗಿದೆ. ಆದರೆ 6 ವರ್ಷಗ ಹಿಂದೆ ಗಲಾಟೆ ಆಗಿತ್ತು ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಹೊಡೆದದ್ದನ್ನು ನಾನು ನೋಡಿಲ್ಲ. ಆದರೆ ಗಲಾಟೆ ಆದಾಗ ನಾನು ಹೋಗಿರುತ್ತೇನೆ. ಗಲಾಟೆಯಲ್ಲಿ ಆರೋಪಿತರು ಹೊಡೆದಾಗ ನಾವು ಆಸ್ಪತ್ರೆಗೆ ಹೋಗಿ ದಾಖಲಾಗಿ ಮಾರನೆ ದಿನ ಪೋಲಿಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟರುತ್ತೇವೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ಸಲ್ಲಿಸಿಲ್ಲ.

ಗಲಾಟೆಗೆ ಸಂಬಂಧಿಸಿದಂತೆ ಪೋಲಿಸರು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಸ್ಥಳ ಪಂಚನಾಮೆಗೆ ನಾನು ಸಹಿ ಹಾಕಿರುವ ಬಗ್ಗೆ ನೆನಪಿಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಯಾವ ದಿನದಂದು ಹೇಳಿಕೆ ನೀಡಿದ್ದೇನೆ ಎಂದು ನೆನಪಿಲ್ಲ. ಮು.ಮಾ 1 ಮತ್ತು 2 ನ್ನು ಚಾಸಾ 1 ರವರು ಪೋಲಿಸರಿಗೆ ಕೊಟ್ಟಿದ್ದು ಎಲ್ಲಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಮು.ಮಾ. 1 ಮತ್ತು 2 ರಂತೆ ಕಲ್ಲುಗಳು ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಸರಿ. ಆರೋಪಿತರು ಕೈ ಕಾಲುಗಳಿಂದ ಮತ್ತು ಕಲ್ಲುಗಳಿಂದ ಚಾಸಾ 1,2 ಮತ್ತು ನಿಮಗೆ ಹೊಡೆದಿರುವುದಾಗಿ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ನಮಗೂ ಮತ್ತು ಆರೋಪಿತರಿಗೂ ವಿಶ್ವಾಸ ಇಲ್ಲ ಎಂದರೆ ಸರಿ.

ಆರೋಪಿತರು ಸದರಿ ರಸ್ತೆಯ ಜಾಗಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ನೀವು ಮತ್ತು ಚಾಸಾ 1 ರವರು ಶಾಮೀಲಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತರ ಮೇಲೆ ವೈಶಮ್ಯದಿಂದ ನೀವು ಅವರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಪೋಲಿಸರ ಮುಂದೆ ಯಾವುದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿಯು ನಿಮಗೆ ಮಚ್ಚು ತೆಗೆದುಕೊಂಡು ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಾ ಎಂದು ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಘಟನೆಗೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ದೂರು

ಕೊಟ್ಟಿಲ್ಲ.  ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

Sd/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.